ಪಾಠವನ್ನು ಕಲಿತರು. ಅದೇನೆಂದರೆ ಜೀವನದಲ್ಲಿ ಬರುವ ಭಯಂಕರ ಕಷ್ಟಕಾರ್ಪಣ್ಯಗಳನ್ನು ಕಂಡು ಓಡುವ ಬದಲು ಎದುರಿಸಿ ನಿಂತದ್ದೇ ಆದರೆ, ಅವು ಆ ಕೋತಿಗಳಂತೆ ಪಲಾಯನ ಮಾಡುತ್ತವೆ.

ವಾರಾಣಸಿಯಲ್ಲಿ ಸ್ವಾಮೀಜಿ ಮಹಾಸಂತರಾದ ತ್ರೈಲಂಗ ಸ್ವಾಮಿಗಳನ್ನು ಸಂದರ್ಶಿಸಿದರು. ತ್ರೈಲಂಗ ಸ್ವಾಮಿಗಳು ಒಂದು ಶಿವ ದೇವಾಲಯದಲ್ಲಿ ಸದಾ ಸಮಾಧಿಸ್ಥಿತಿಯಲ್ಲೇ ಇರುತ್ತಿದ್ದರು. ಶ್ರೀರಾಮಕೃಷ್ಣರೂ ಹಿಂದೆ ಕಾಶಿಗೆ ಬಂದಾಗ ಅವರನ್ನು ಭೇಟಿ ಮಾಡಿದ್ದರು. ಹಾಗೆಯೇ ಸ್ವಾಮೀಜಿ ಪ್ರಸಿದ್ಧ ಸಂಸ್ಕೃತ ವಿದ್ವಾಂಸರಾದ ಪ್ರಮದದಾಸ ಮಿತ್ರರನ್ನು ಭೇಟಿ ಮಾಡಿದರು ನಂತರ ಗಾಜೀಪುರದಲ್ಲಿ ಪ್ರಸಿದ್ಧ ಮಹಾಪುರುಷರೆಂದೂ, ಹಠಯೋಗಿಯೆಂದೂ ಪ್ರಸಿದ್ಧರಾಗಿದ್ದ ಪವಾಹಾರಿ ಬಾಬಾ ಅವರ ಸಂದರ್ಶನ ಮಾಡಿದರು.

ನಂತರ ಸ್ವಾಮೀಜಿ ಅಯೋಧ್ಯೆಯ ಕಡೆಗೆ ಹೊರಟರು. ಅಯೋಧ್ಯೆಯನ್ನು ಕಂಡಾಗ ರಾಮಾಯಣದ ದೃಶ್ಯಗಳೂ ಅಯೋಧ್ಯೆಯ ಗತವೈಭವವೂ ಅವರ ಕಣ್ಮುಂದೆ ಹಾದು ಹೋದವು. ಅಲ್ಲಿಂದ ಲಕ್ನೋಗೆ ಬಂದರು. ಲಕ್ನೋದಿಂದ ಅವರ ಪ್ರಯಾಣ ಆಗ್ರಾಕ್ಕೆ. ಮೊಘಲ್ ಸಾಮ್ರಾಜ್ಯದ ನೆನಪುಗಳು ಜೀವಂತವಾಗಿರುವ ನಗರ ಆಗ್ರಾ. ಇಲ್ಲಿ ಭಾರತೀಯ ಕಲಾಕಾರರ ಕೌಶಲವನ್ನು ನೋಡುತ್ತ ಸ್ವಾಮೀಜಿ ಆಶ್ಚರ್ಯಚಕಿತರಾದರು. ಅದರಲ್ಲೂ ಜಗತ್ತಿನ ವಿಸ್ಮಯಗಳಲ್ಲೊಂದಾದ ತಾಜ್‌ಮಹಲಿನ ಸೌಂದರ್ಯ ಅವರ ಮನಸ್ಸನ್ನು ಸೆರೆಹಿಡಿದುಬಿಟ್ಟಿತು.

**ಬೃಂದಾವನ ಕ್ಷೇತ್ರ :** ಸ್ವಾಮೀಜಿ ಆಗ್ರಾದಿಂದ ಹೊರಟು ಬೃಂದಾವನ ಕ್ಷೇತ್ರದೆಡೆಗೆ ಸಾಗಿದರು. ಬೃಂದಾವನದಲ್ಲಿ ಬಲರಾಮ ಬಾಬುವಿನ ಪೂರ್ವಜರು ಕಟ್ಟಿಸಿದ್ದ ಛತ್ರದಲ್ಲಿ ಇಳಿದುಕೊಂಡರು. ಬೃಂದಾವನಕ್ಕೆ ಬಂದೊಡನೆ ಅವರಲ್ಲೊಂದು ದಿವ್ಯಭಾವ ಉತ್ಪನ್ನವಾಗಿಬಿಟ್ಟಿತು. ಶ್ರೀಕೃಷ್ಣನ ದಿವ್ಯ ಆಧ್ಯಾತ್ಮಿಕ ಲೀಲೆ ಮತ್ತು ಅದ್ಭುತ ಘಟನೆಗಳೆಲ್ಲ ನೆನಪಿಗೆ ಬಂದು ಅವರ ಹೃದಯ ಭಕ್ತಿಭಾವರಂಜಿತವಾಗಿಬಿಟ್ಟಿತು. ಶ್ರೀಕೃಷ್ಣನು ಲೀಲೆಯಾಡಿದ ಪ್ರತಿಯೊಂದು ಸ್ಥಳವನ್ನೂ ಸಂದರ್ಶಿಸುವ ನಿರ್ಧಾರ ಮಾಡಿದರು.

ಗೋವರ್ಧನ ಪರ್ವತಕ್ಕೆ ಪ್ರದಕ್ಷಿಣೆ ಹಾಕಲು ಸ್ವಾಮೀಜಿ ಹೊರಟರು. ಪ್ರದಕ್ಷಿಣೆ ಮಾಡುವ ಸಮಯದಲ್ಲಿ ಭಿಕ್ಷೆ ಬೇಡಬಾರದೆಂದು ತೀರ್ಮಾನಿಸಿದರು. ಹಸಿವಿನಿಂದ ಬಳಲುತ್ತಿದ್ದಾಗ, ಹಿಂದಿನಿಂದ ಯಾರೋ ಒಬ್ಬನು "ಬಾಬಾಜಿ!" ಎಂದು ಕೂಗಿ ಕರೆದು, "ನಿಮಗೋಸ್ಕರ ಊಟ ತಂದಿದ್ದೇನೆ. ದಯವಿಟ್ಟು ಸ್ವೀಕರಿಸಬೇಕು" ಎಂದು ಹೇಳಿ ಕೆಲವೇ ಕ್ಷಣಗಳಲ್ಲಿ ಮಾಯವಾಗಿಬಿಟ್ಟನು! ಯಾರಿರಬಹುದು ಅವನು?! ಅನಾಥರಕ್ಷಕನಾದ ಭಗವಂತ ತನ್ನ ಭಕ್ತರನ್ನು ನೋಡಿಕೊಳ್ಳುವ ಪರಿಯನ್ನು ಕಂಡು ಅವರ ಕಣ್ಣುಗಳಿಂದ ನೀರು ಧಾರೆಯಾಗಿ ಹರಿದುಬಂತು. ಭಾವಾವೇಶದಿಂದ. "ಜೈರಾಧೆ! ಜೈ ಶ್ರೀಕೃಷ್ಣ !" ಎಂದು ಜಯಕಾರ ಮಾಡಿದರು. ಗೋವರ್ಧನಗಿರಿಯ ಪರಿಕ್ರಮದ ನಂತರ 'ರಾಧಾಕುಂಡ'ಕ್ಕೆ ಬಂದು ಸ್ನಾನ ಮಾಡಿದರು.

ಈಗ ಸ್ವಾಮೀಜಿಯವರು ಹರಿದ್ವಾರಕ್ಕೆ ಹೋಗಲು ಮನಸ್ಸು ಮಾಡಿದರು. ಹರಿದ್ವಾರಕ್ಕೆ ಹೋಗುವ ದಾರಿಯಲ್ಲಿ ಹತ್ರಾಸ್ ರೈಲು ನಿಲ್ದಾಣದಲ್ಲಿ ಸ್ವಾಮೀಜಿ ಹಸಿವಿನಿಂದ ದಣಿದು ಕುಳಿತುಬಿಟ್ಟಿದ್ದರು. ಆಗ ಶರಶ್ಚಂದ್ರ ಎಂಬ ಉತ್ಸಾಹಿ ಯುವಕ ಆ ರೈಲುನಿಲ್ದಾಣದ ಅಸಿಸ್ಟೆಂಟ್ ಸ್ಟೇಷನ್‌ಮಾಸ್ಟರ್ ಆಗಿದ್ದನು. ಸ್ವಾಮೀಜಿಯನ್ನು ನೋಡಿ ಆಕರ್ಷಿತನಾಗಿ ಮನೆಗೆ ಕರೆದುಕೊಂಡು ಹೋಗಿ ಊಟೋಪಚಾರಗಳನ್ನು ನೀಡಿದನು. ಮುಂದೆ ಸ್ವಾಮೀಜಿಯ ದಿವ್ಯ ವ್ಯಕ್ತಿತ್ವದಿಂದ ಆಕರ್ಷಿತನಾಗಿ ತನ್ನ ಉದ್ಯೋಗಕ್ಕೆ ವಿದಾಯ ಹೇಳಿ ವಿವೇಕಾನಂದರ ಮೊಟ್ಟ ಮೊದಲ ಶಿಷ್ಯನಾದನು. ಅವರೇ ಸ್ವಾಮಿ ಸದಾನಂದರು!

**ಹೃಷೀಕೇಶದಲ್ಲಿ :** ಸ್ವಾಮಿ ವಿವೇಕಾನಂದರು ಹೃಷೀಕೇಶದಲ್ಲಿ ಗುಡಿಸಲೊಂದರಲ್ಲಿ ಇಳಿದುಕೊಂಡು ಇತರ ಸಾಧು ಸಂನ್ಯಾಸಿಗಳ ಜೊತೆಯಲ್ಲಿ ಧ್ಯಾನಾದಿಗಳಲ್ಲಿ ನಿರತರಾದರು. ಸುತ್ತಲೂ ಶುಭ್ರ, ಹಿಮದಿಂದ ಕೂಡಿದ ಬೆಟ್ಟಗಳು; ತಿಳಿಯಾಗಿ ಹರಿಯುವ ಗಂಗೆಯ ಕಲರವ. ಹೀಗೆ ಇದು ತಪಸ್ಸಿಗೆ ಅತ್ಯಂತ ಯೋಗ್ಯವಾದ ಸ್ಥಳ. ಕೆಲವು ದಿನಗಳ ನಂತರ ಅವರು ಬದರಿ ಕೇದಾರಕ್ಕೆ ಹೋಗಲು ನಿರ್ಧರಿಸಿದರು. ಹಿಮಾಲಯದ ಉನ್ನತ ಶಿಖರಗಳನ್ನೇರಿ ಹೋಗುವ ಉತ್ಸಾಹ ಅವರಲ್ಲಿ ತುಡಿಯುತ್ತಿತ್ತು. ಸಂನ್ಯಾಸಿಗಳಿಗೂ ಹಿಮಾಲಯದ ಶಿಖರಗಳಿಗೂ ಯುಗಯುಗಗಳ ಸಂಬಂಧ. ಈಗ ಸ್ವಾಮೀಜಿ ಸ್ವತಂತ್ರ ಹಕ್ಕಿಯಂತೆ ಆನಂದಭರಿತರಾಗಿದ್ದಾರೆ. ಅವರು ಬಹಳವಾಗಿ ಹಂಬಲಿಸಿದ್ದ ಏಕಾಂತತೆ, ಹಳ್ಳಿಗಳ ಪರಿಶುದ್ಧ – ಪ್ರಶಾಂತ ವಾತಾವರಣ, ದಾರಿಯುದ್ದಕ್ಕೂ ಸಿಗುವ ಹೊಸ ಹೊಸ ಸ್ಥಳಗಳು, ಅಲ್ಲಲ್ಲಿ ಭೇಟಿಯಾಗುವ ಹೊಸ ಹೊಸ ಜನರು – ಇವೆಲ್ಲ ಅವರ ಮನಸ್ಸಿಗೆ ಮುದವನ್ನುಂಟುಮಾಡಿದವು.

**ಹಿಮಾಲಯದ ತಪ್ಪಲಿನಲ್ಲಿ :** ಒಮ್ಮೆ ಸ್ವಾಮೀಜಿ ಹಿಮಾಲಯದ ಬೆಟ್ಟಗುಡ್ಡಗಳ ದಾರಿಯಾಗಿ ನಡೆಯುತ್ತ ನೈನಿತಾಲಿಗೆ ಬಂದು ಸೇರಿದರು. ಅಲ್ಲಿ ರಾಮಪ್ರಸನ್ನ ಭಟ್ಟಾಚಾರ್ಯ ಎಂಬುವವರ ಅತಿಥಿಗಳಾಗಿ ಆರು ದಿನಗಳನ್ನು ಕಳೆದು, ನಂತರ ಬದರಿಕಾಶ್ರಮದ ದಾರಿಯಲ್ಲಿರುವ ಆಲ್ಮೋರಕ್ಕೆ ಹೊರಟರು. ಬಯಲು ಪ್ರದೇಶದಿಂದ ಆಲ್ಮೋರ ಪರ್ವತ ಪ್ರದೇಶದತ್ತ ಕೈಗೊಂಡ ದೀರ್ಘ ಪ್ರಯಾಣ ಸ್ವಾಮೀಜಿಯ ಪಾಲಿಗೆ ಅತ್ಯಂತ ಉಲ್ಲಾಸಕರವಾಗಿತ್ತು. ಆ ಪರ್ವತ ಪ್ರದೇಶಗಳ ಪ್ರಶಾಂತ ಮನೋಹರವಾದ ವಾತಾವರಣದಲ್ಲಿ ಸ್ವಾಮೀಜಿಯ ಹೃದಯ ಮನಸ್ಸುಗಳು ಅಪೂರ್ವ ಶಾಂತಿಯನ್ನು ಅನುಭವಿಸಿದವು. ಈ ಸುದೀರ್ಘ ಕಾಲ್ನಡಿಗೆಯ ಪ್ರಯಾಣದಿಂದ ಹಾಗೂ ಕಾಲಕಾಲಕ್ಕೆ ಅನ್ನ ಆಹಾರಗಳಿಲ್ಲದ್ದರಿಂದ ದೇಹಕ್ಕೆ ಸಾಕಷ್ಟು ಬಳಲಿಕೆಯಾಗಿದ್ದರೂ, ಅವರ ಪಾಲಿಗೆ ಈ ಪರ್ವತ ಪ್ರಯಾಣವು ಬಹಳ ಆನಂದದಿಂದ ಕೂಡಿತ್ತು.

ಸ್ವಾಮೀಜಿ ಹಿಮಾಲಯಕ್ಕೆ ಬಂದಿದ್ದರ ಉದ್ದೇಶ ತೀವ್ರ ಆಧ್ಯಾತ್ಮಿಕ ಸಾಧನೆಯಲ್ಲಿ ಮುಳುಗಿಬಿಡಬೇಕು ಎಂಬುದಾಗಿತ್ತು. ಇದು ಅವರ ಬಹಳ ವರ್ಷಗಳ ಹಂಬಲ. ಆದ್ದರಿಂದ ಬದರೀಷಾ ಎಂಬುವವರ ಮನೆಯಲ್ಲಿ ಗುರುಭಾಯಿಗಳೊಂದಿಗೆ ಕೆಲವು ದಿನಗಳನ್ನು ಕಳೆದ ಬಳಿಕ, ಅವರು ಒಂದು ಗುಹೆಯನ್ನು ಕಂಡುಕೊಂಡು ಅಲ್ಲಿ ಧ್ಯಾನಮಗ್ನರಾದರು. ಹಗಲಿರುಳೂ ಗಾಢಧ್ಯಾನದಲ್ಲಿ ಕಳೆದರು. ಗುಹೆಯ ಒಳಗೂ ಪರಮಶಾಂತಿ, ಹೊರಗೂ ನೀರವ ಮೌನ. ಅತ್ಯಂತ ಉನ್ನತವಾದ ಆಧ್ಯಾತ್ಮಿಕ ಅನುಭವಗಳನ್ನು ಸ್ವಾಮೀಜಿ ಇಲ್ಲಿ ಪಡೆದುಕೊಂಡರು.

**ಶ್ರೀನಗರ :** ಈಗ ಸ್ವಾಮೀಜಿ ಗಢವಾಲಿನ ರಾಜಧಾನಿ ಶ್ರೀನಗರದ ಕಡೆಗೆ ಪ್ರಯಾಣ ಹೊರಟರು. ದಾರಿಯುದ್ದಕ್ಕೂ ಕಂಡುಬರುತ್ತಿದ್ದ ತಿಳಿನೀರಿನ ತೊರೆಗಳು, ಮನೋಹರವಾದ ಜಲಪಾತಗಳು, ಹಚ್ಚ

ಹಸಿರಾದ ವನಸಿರಿ, ಪರಮ ಪ್ರಶಾಂತತೆಯಿಂದ ಕೂಡಿದ ನಿರ್ಜನ ಪ್ರದೇಶಗಳು, ಅಲ್ಲಲ್ಲಿ ಕಣ್ಣಿಗೆ ಗೋಚರವಾಗುತ್ತಿದ್ದ ಶುಭ್ರ ಹಿಮರಾಶಿ, ಇವುಗಳೆಲ್ಲ ಅವರ ಮನಸ್ಸಿಗೆ ಆನಂದವನ್ನು ಉಂಟುಮಾಡಿದವು.

ಶ್ರೀನಗರಕ್ಕೆ ಹೋಗುವ ದಾರಿಯಲ್ಲಿ ಸ್ವಾಮೀಜಿ ರುದ್ರಪ್ರಯಾಗ ವನ್ನು ತಲುಪಿದರು. ಇದು ಮಂದಾಕಿನಿ ಹಾಗೂ ಅಲಕನಂದಾ ನದಿಗಳ ಸಂಗಮಸ್ಥಳ. ಇಲ್ಲಿ ರುದ್ರನಾಥನ ದೇವಾಲಯವಿದೆ. ನಂತರ ಗಂಗಾ ಮತ್ತು ಯಮುನಾ ನದಿಗಳ ಉಗಮ ಸ್ಥಾನಗಳಾದ ಗಂಗೋತ್ರಿ ಯಮುನೋತ್ರಿಗಳೆರಡೂ ಸಿಕ್ಕುತ್ತವೆ. ಇವನ್ನೆಲ್ಲ ನೋಡಿ ಕೊಂಡು, ಸ್ವಾಮೀಜಿ ಟೆಹರಿಗೆ ಬಂದರು. ಅಲ್ಲಿಂದ ಡೆಹರಾಡೂನಿಗೆ ಬಂದರು. ಅಲ್ಲಿ ತಮ್ಮ ಗುರುಭಾಯಿಗಳಾದ ಸ್ವಾಮಿ ತುರೀಯಾ ನಂದರನ್ನು ಭೇಟಿಯಾಗಿ ತುಂಬ ಸಂತೋಷಪಟ್ಟರು.

ಇಲ್ಲಿಂದ ಸ್ವಾಮೀಜಿ ಮತ್ತೊಮ್ಮೆ ಪುರಾಣಪ್ರಸಿದ್ಧವಾದ ಹೃಷೀ ಕೇಶಕ್ಕೆ ಬಂದರು. ಇದು ನಯನ ಮನೋಹರ, ಪರಮ ಪ್ರಶಾಂತ ಸ್ಥಳ. ಗಂಗೆ ಅರ್ಧವೃತ್ತಾಕಾರದಲ್ಲಿ ಹರಿಯುತ್ತಿದ್ದಾಳೆ. ಆ ದಿನಗಳಲ್ಲಿ ಈ ಪ್ರದೇಶ ಸಂಪೂರ್ಣ ಅರಣ್ಯಮಯವಾಗಿತ್ತು. ಸುತ್ತಮುತ್ತಲೆಲ್ಲ ಸಂನ್ಯಾಸಿಗಳ ಆಶ್ರಮಗಳು, ಕುಟೀರಗಳು; ಅಲ್ಲಿನ ವಾತಾವರಣವೆಲ್ಲಾ ಪರಮ ಪರಿಶುದ್ಧವಾಗಿದ್ದವು.

ಈ ರೀತಿಯಾಗಿ ಸ್ವಾಮೀಜಿ ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್, ರಾಜಾಸ್ಥಾನ, ಮಹಾರಾಷ್ಟ್ರಗಳ ಹಲವಾರು ಸ್ಥಳಗಳಿಗೆ ಭೇಟಿಕೊಟ್ಟು ಬೆಳಗಾವಿಗೆ ಬರುವ ಮೂಲಕ ಕರ್ನಾಟಕದಲ್ಲಿ ಪದಾ ರ್ಪಣೆ ಮಾಡಿದರು. ನಂತರ ಗೋವಾಕ್ಕೆ ಬಂದು ಧಾರವಾಡದ ಮೂಲಕ ಬೆಂಗಳೂರಿಗೆ ಬಂದರು. ಅಲ್ಲಿ ಮೈಸೂರು ರಾಜ್ಯದ ದಿವಾನರಾದ ಸರ್. ಶೇಷಾದ್ರಿ ಅಯ್ಯರ್‌ರವರ ಭೇಟಿಯಾಯಿತು. ದಿವಾನರ ಆಹ್ವಾನದ ಮೇರೆಗೆ ಸ್ವಾಮೀಜಿ ಮೂರು ವಾರಗಳ ಕಾಲ ಅವರ ಅತಿಥಿಯಾಗಿದ್ದರು. ಆಗಿನ ಮಹಾರಾಜರಾಗಿದ್ದ ಚಾಮರಾಜ ಒಡೆಯರ ಮೇಲೆ ಸ್ವಾಮೀಜಿ ತುಂಬ ಪ್ರಭಾವವನ್ನು ಬೀರಿದರು.

ಮೈಸೂರಿನಿಂದ ಸ್ವಾಮೀಜಿ ಕೇರಳದ ಕಡೆ ಪ್ರಯಾಣ ಬೆಳೆಸಿ ದರು. ಶೋರನೂರು ನಿಲ್ದಾಣದಲ್ಲಿ ಇಳಿದು, ಎತ್ತಿನ ಗಾಡಿಯಲ್ಲಿ ತ್ರಿಚೂರಿನ ಕಡೆಗೆ ಮುಂದುವರಿದರು. ಸ್ವಾಮೀಜಿಯ ಬಗ್ಗೆ ಕೇಳಿ ತಿಳಿದ ರಾಜಮನೆತನದ ಅನೇಕ ಸ್ತ್ರೀಯರು ಅವರನ್ನು ಭೇಟಿ ಮಾಡಿ ಅವರೊಂದಿಗೆ ಶುದ್ಧವಾದ ಸಂಸ್ಕೃತದಲ್ಲಿ ಸಂಭಾಷಣೆ ಮಾಡಿದರು. ಸ್ತ್ರೀಯರು ಇಷ್ಟು ನಿರರ್ಗಳವಾಗಿ ಸಂಸ್ಕೃತದಲ್ಲಿ ಮಾತ ನಾಡುವುದನ್ನು ಕಂಡು ಸ್ವಾಮೀಜಿಗೆ ಆಶ್ಚರ್ಯದೊಂದಿಗೆ ಸಂತೋಷ ಕೂಡ ಆಯಿತು.

**ಕನ್ಯಾಕುಮಾರಿಯಲ್ಲಿ :** ತಿರುವನಂತಪುರದಿಂದ ಸ್ವಾಮೀಜಿ ಈಗ ಭರತಖಂಡದ ದಕ್ಷಿಣತುದಿಯಾದ, ಸಮಸ್ತ ಹಿಂದೂಗಳಿಗೆ ತೀರ್ಥ ವಾಗಿರುವ ಕನ್ಯಾಕುಮಾರಿಗೆ ಆಗಮಿಸಿದರು. ಒಡನೆ ಸ್ವಾಮೀಜಿ ನೇರವಾಗಿ ದೇವಿಯ ದರ್ಶನ ಮಾಡಿದರು. ಅಲ್ಲಿ ಭಾರತದ ಕೋಟಿ ಕೋಟಿ ದೀನದಲಿತರನ್ನು ಮೇಲೆತ್ತಲು ಪ್ರಾರ್ಥನೆ ಮಾಡಿ ದರು. ದೇವಾಲಯದ ಆಚೆ ಇರುವ ಮಹಾಸಾಗರದ ಕಡೆ ಅವರ ದೃಷ್ಟಿ ಹರಿಯಿತು. ಸಮುದ್ರದ ಮಧ್ಯೆ ಇದ್ದ ಎರಡು ಮಹಾ ಬಂಡೆಗಳನ್ನು ನೋಡಿದರು. ಅಲ್ಲಿಗೆ ಹೋಗಲು ಇಚ್ಛೆಯಾಯಿತು. ಅಂಬಿಗರಿಗೆ ಕೊಡಲು ಸ್ವಾಮೀಜಿಯ ಬಳಿ ಬಿಡಿಗಾಸೂ ಇರಲಿಲ್ಲ. ಆದ್ದರಿಂದ ನೀರಿಗೆ ಧುಮುಕಿ, ತೆರೆಗಳನ್ನು ಸೀಳಿಕೊಂಡು ಈಜುತ್ತ ಬಂಡೆಯನ್ನೇರಿ ಕುಳಿತರು. ಭಾರತದ ತುತ್ತ ತುದಿಯ ಬಂಡೆಯ ಮೇಲೆ ಕುಳಿತ ಸ್ವಾಮೀಜಿ ಗಾಢವಾದ ಧ್ಯಾನದಲ್ಲಿ ಕುಳಿತರು. ಭಾರತದ ಭೂತ – ಭವಿಷ್ಯತ್ – ವರ್ತಮಾನಗಳ ಬಗ್ಗೆ ಧ್ಯಾನಿಸಿ ದರು. ಸಮಸ್ತ ಭಾರತದ ಜನಕೋಟಿಯ ಬಗ್ಗೆ ಚಿಂತಿಸಿದರು. ಆಧ್ಯಾತ್ಮಿಕತೆಯ ಪುನರ್ಜಾಗೃತಿಯಿಂದ ಮಾತ್ರವೇ ಭಾರತ ಮತ್ತೊಮ್ಮೆ ಮೇಲೇಳಲು ಸಾಧ್ಯವೆಂದು ಸಾಕ್ಷಾತ್ಕರಿಸಿಕೊಂಡರು.

ಕನ್ಯಾಕುಮಾರಿಯಲ್ಲಿ ತಮ್ಮ ಜೀವನ ಉದ್ದೇಶಗಳನ್ನು ಮನಸ್ಸಿ ನಲ್ಲಿ ಇಟ್ಟುಕೊಂಡು, ತಮಿಳುನಾಡಿನ ರಾಮೇಶ್ವರದೆಡೆಗೆ ಹೊರ ಟರು. ದಾರಿಯಲ್ಲಿ ಮಧುರೆಯನ್ನು ಸಂದರ್ಶಿಸಿ, ಮೀನಾಕ್ಷಿ ದೇವಿಯ ದರ್ಶನ ಮಾಡಿದರು. ಮಧುರೆಯಿಂದ ಸ್ವಾಮೀಜಿ ನಡೆದುಕೊಂಡು ಹೋಗಿ ರಾಮೇಶ್ವರವನ್ನು ತಲುಪಿದರು. ಪವಿತ್ರ ಸಮುದ್ರಸ್ನಾನವನ್ನು ಮುಗಿಸಿ ಬಂದ ಸ್ವಾಮೀಜಿ, ಶ್ರೀರಾಮೇಶ್ವರ ಲಿಂಗವನ್ನು ಪೂಜಿಸಿ ಧನ್ಯರಾದರು. ಈ ರಾಮೇಶ್ವರ ಯಾತ್ರೆ ಯೊಂದಿಗೆ ಸ್ವಾಮಿ ವಿವೇಕಾನಂದರ ಪರಿವ್ರಾಜಕ ಜೀವನದ ಒಂದು ಹಂತ ಪೂರ್ಣಗೊಂಡಿತು. ಈ ತೀರ್ಥಯಾತ್ರೆಯಲ್ಲಿ ಅವರು ತಮ್ಮ ಜೀವನದ ಉದ್ದೇಶಗಳನ್ನು ಕಂಡುಕೊಳ್ಳುವಲ್ಲಿ ಯಶಸ್ವಿ ಯಾದರು.


## ಸ್ವಾಮಿ ವಿವೇಕಾನಂದರ ಸ್ಫೂರ್ತಿ ಮತ್ತು ಪ್ರಭಾವ – ಅನುಭವ ಕಥನ

### ಪಿ.ಯು.ಸಿ. ಪಾಸಾಗಿದ್ದರೆ ಸ್ವಾಮೀಜಿಯ ಸಂಪರ್ಕಕ್ಕೆ ಬರುತ್ತಿರಲಿಲ್ಲ!

**ಎರಡು ವರ್ಷಗಳ ಹಿಂದಿನ ಮಾತು. ಮನೆಯಲ್ಲಿ ಎಲ್ಲರೂ ಹಿರಿಯೂರಿನ ಶ್ರೀ ಶಾರದಾಶ್ರಮದ ಸಂಪರ್ಕದಲ್ಲಿದ್ದರು. ಆದರೆ ನಾನು ಮಾತ್ರ ಹೋಗುತ್ತಿರಲಿಲ್ಲ, ಒಂದು ದಿನ ಆಶ್ರಮದ ಮಾತಾಜಿಯವರು ಯುವಸಮ್ಮೇಳನಕ್ಕೆ ಬರಬೇಕೆಂದು ಒತ್ತಾಯಿಸಿದರು. ಅವರ ಒತ್ತಾಯಕ್ಕೆ ಮಣಿದು ಯುವ ಸಮ್ಮೇಳನಕ್ಕೆ ಹೋದೆ. ಬಹುಶಃ ಆ ದಿನ ನನ್ನ ಜೀವನಕ್ಕೆ ದೊಡ್ಡದೊಂದು ತಿರುವನ್ನು ಕೊಟ್ಟಂತಹ ದಿನ. ಅಲ್ಲಿ ಸ್ವಾಮಿ ವಿವೇಕಾನಂದರನ್ನು ಕುರಿತು ನಡೆದಂತಹ ಉಪನ್ಯಾಸಗಳನ್ನು ಕೇಳಿದಾಗ ಯಾವುದೋ ಒಂದು ಉತ್ಸಾಹ, ಸ್ಫೂರ್ತಿ ನನ್ನೊಳಗಿನಿಂದಲೇ ಉದಿಸಿದಂತಹ ಅನುಭವವಾಯಿತು. ಅಂದೆಯೇ ಸ್ವಾಮೀಜಿಯವರ ಜೀವನಚರಿತ್ರೆಯನ್ನು ಓದಲು ಪ್ರಾರಂಭಿಸಿದೆ. ಪಿ.ಯು.ಸಿ. ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿ, ಮುಂದೆ ಏನು ಮಾಡುವುದು ಎಂದು ತಿಳಿಯದೆ ಪಾತಾಳದ ಆಳಕ್ಕೆ ನೂಕಿದಂತಾಗಿದ್ದ ನನಗೆ, ಸ್ವಾಮೀಜಿಯ ನುಡಿಗಳು ಹೊಸ ಶಕ್ತಿಯನ್ನು ತಂದುಕೊಟ್ಟವು. ಸ್ವಾಮೀಜಿಯವರೇ ಹೇಳುತ್ತಾರೆ, "ನಿಮ್ಮ ಜೀವನದಲ್ಲಿ ತಪ್ಪುಗಳಿಗೂ ಸ್ಥಾನವಿದೆ, ಆ ತಪ್ಪುಗಳನ್ನು ಹರಸಿರಿ. ಆ ತಪ್ಪುಗಳನ್ನು ಮಾಡಿದ್ದಕ್ಕಾಗಿಯೇ ಇಂದು ನೀವು ಹೀಗಿರಲು ಸಾಧ್ಯವಾಗಿದೆ." ಹಾಗೆಯೇ ನನ್ನ ಜೀವನದಲ್ಲಿಯೂ ಅಂದು ನಾನು ಪಿ.ಯು.ಸಿ.ಯಲ್ಲಿ ಉತ್ತೀರ್ಣನಾಗಿದ್ದರೆ, ಸ್ವಾಮೀಜಿಯ ಸಂಪರ್ಕಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲವೇನೋ. ಅಂತೆಯೇ ಸ್ವಾಮೀಜಿಯವರ ಮಾತಿನಂತೆ ಪಿ.ಯು.ಸಿ. ಪರೀಕ್ಷೆಯನ್ನು ಮತ್ತೆ ತೆಗೆದುಕೊಂಡು ಪಾಸು ಮಾಡಿದೆ. ಈಗ ಪದವಿ ವ್ಯಾಸಂಗ ಮಾಡುತ್ತಿದ್ದೇನೆ.**

**– ರಾಹುಲ್, ಹಿರಿಯೂರು**

# ಸ್ವಾಮಿ ವಿವೇಕಾನಂದರ ವೈಜ್ಞಾನಿಕ ಮನೋಭಾವನೆ



ಸ್ವಾಮಿ ಶಿವಕಾಂತಾನಂದ

**ಸ್ವಾಮಿ ವಿವೇಕಾನಂದರು ವಿಜ್ಞಾನ ಮತ್ತು ಧರ್ಮಗಳು ಒಂದುಗೂಡಬೇಕೆಂಬ ಮಹದಾಸೆಯನ್ನು ಇಟ್ಟುಕೊಂಡಿದ್ದರು. ವಿಜ್ಞಾನವು ಅತೀಂದ್ರಿಯದ ಬಗೆಗಿನ ಪೂರ್ವಗ್ರಹವನ್ನೂ, ಧರ್ಮವು ಮೌಢ್ಯವನ್ನೂ ಬಿಟ್ಟರೆ, ಅವರೆಡೂ ಸತ್ಯಾನ್ವೇಷಣೆಯಲ್ಲಿ ಸಹಭಾಗಿಗಳಾಗುತ್ತವೆಂದು ಅಭಿಪ್ರಾಯಪಟ್ಟಿದ್ದರು. ಇದಲ್ಲದೆ, ಧರ್ಮ ಕೂಡ ಒಂದು ಬಗೆಯ ವಿಜ್ಞಾನವೇ, ಅದು ಅತೀಂದ್ರಿಯದ ವಿಜ್ಞಾನ ಎಂದು ಸಾಧಿಸಿತೋರಿಸಿದರು. ವಿಜ್ಞಾನದ ಬಗೆಗಿನ ಅವರ ಭಾವನೆಗಳನ್ನು ನಿರ್ದುಷ್ಟವಾಗಿ, ವಿದ್ವತ್ಪೂರ್ಣವಾಗಿ ವಿವರಿಸಿರುವ ಸ್ವಾಮೀಜಿಯವರು ಕೊಡಗಿನ ಪೊನ್ನಂಪೇಟೆಯ ರಾಮಕೃಷ್ಣ ಶಾರದಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ವಾಗ್ಮಿಗಳು ಮತ್ತು ಲೇಖಕರು. ಇವರು ಬರೆದ ಹಲವು ಲೇಖನಗಳು ಈಗಾಗಲೇ ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.**

**ಮಾ**ನವ ನಾಗರಿಕತೆಯ ಮಹತ್ತರ ತಿರುವು ಎಂದರೆ ವಿಜ್ಞಾನದ ಉಗಮ. ನಾವಿಂದು ವಿಕಾಸ ಪರ್ವತದ ಅಂಚನ್ನು ತಲುಪಿದ್ದೀವೆಯೋ ಎಂದೆನಿಸುತ್ತದೆ. ತನ್ನ ಬುದ್ಧಿಸಾಮರ್ಥ್ಯವನ್ನು ಹಿಗ್ಗಿಸಿ, ಪ್ರಕೃತಿ ರಹಸ್ಯವನ್ನು ಭೇದಿಸಿ ಅದರ ಉಪ–ಉತ್ಪನ್ನವಾಗಿ (by-product) ಬಂದ ಫಲವನ್ನು ತನ್ನ ಬೌದ್ಧಿಕ ಸುಖಕ್ಕಾಗಿ ಮಾನವ ಬಳಸಿಕೊಂಡಿದ್ದಾನೆ. ವಿಜ್ಞಾನದಿಂದಾದ ಕೆಲವು ಅಪಚಾರಗಳನ್ನೂ ಸಮಸ್ಯೆಗಳನ್ನೂ ಬದಿಗಿಟ್ಟು, ಅದರಿಂದುಂಟಾದ ಮಾನವ ವಿಕಾಸವನ್ನೂ ಅಭಿವೃದ್ಧಿಯನ್ನೂ ನೋಡಿದರೆ ವಿಜ್ಞಾನ ಯುಗದ ಅಗಾಧ ಶಕ್ತಿಯ ಅರಿವು ನಮಗಾಗುತ್ತದೆ. ವೈಜ್ಞಾನಿಕತೆಯೆಂದರೆ ಪ್ರತಿಯೊಂದು ಪ್ರತಿಪಾದನೆಯನ್ನೂ (Postulate) ವಿಶ್ಲೇಷಿಸುವ, ಪ್ರಶ್ನಿಸುವ, ಪರಾಮರ್ಶಿಸುವ ಬಗೆ; ಇದಾದ ನಂತರವೂ ಆ ಪ್ರತಿಪಾದನೆಯು (Postulate) ಸತ್ಯವೆನಿಸಿದರೆ, ಅದನ್ನು 'ಸತ್ಯ'ವೆಂದು ಸಾಧಿಸಿ, ನಂತರ ಸಾಮಾನ್ಯೀಕರಿಸುವ (deep observation and generalization) ವಿಧಾನ.

ಹಿಂದಿನ ಕಾಲದಲ್ಲಿ ಶಾಸ್ತ್ರ, ಮತ, ಆಪ್ತವಾಕ್ಯಗಳ ಮೂಲಕ ತ್ರಿಕಾಲಾಬಾಧಿತ ಸತ್ಯವೆಂದು ಪ್ರಶ್ನಾತೀತವಾಗಿ ನಂಬಿದ್ದ ಧಾರ್ಮಿಕ ಶ್ರದ್ಧೆಗಳನ್ನೂ ಕೂಡ, ವಿಜ್ಞಾನದ ಬೂದುಗನ್ನಡಿಗೆ ಒಳಪಡಿಸುವ ಕಾಲವಿದು. ಹೀಗಾಗಿ ಧಾರ್ಮಿಕ ವ್ಯವಸ್ಥೆಯು ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಅವತಾರ ವರಿಷ್ಠರಾದ ಶ್ರೀರಾಮಕೃಷ್ಣರ ಮುಖವಾಣಿಯಾದ ಸ್ವಾಮಿ ವಿವೇಕಾನಂದರು ಸನಾತನ ಧರ್ಮವನ್ನು ಉಳಿಸಿದ್ದಷ್ಟೇ ಅಲ್ಲದೆ, ಅದರ ವ್ಯಾಪ್ತಿಯನ್ನು ಹಿಗ್ಗಿಸಿ, ವೈಜ್ಞಾನಿಕ ಪ್ರಹಾರಕ್ಕೆ ಸಮರ್ಥವಾಗಿ ನಿಲ್ಲಬಲ್ಲ ಏಕೈಕ ಧರ್ಮವು ವೇದಾಂತವೊಂದೇ ಎಂದು ಸಿದ್ಧಮಾಡಿ ತೋರಿಸಿದರು. ಅದನ್ನು ಅವರು ಹೇಗೆ ಸಾಧಿಸಿದರು ಎಂಬುದನ್ನು ಈಗ ನೋಡೋಣ.

ನರೇಂದ್ರನ ಮನೆ ಸಾಂಪ್ರದಾಯಿಕ ಮತ್ತು ಆಧುನಿಕತೆಯ ಸಮಾಗಮವಾಗಿತ್ತು. ಉದಾರತೆಗೆ ಹೆಸರುವಾಸಿಯಾದ ಶ್ರೀಮಂತ ದತ್ತ ವಂಶದಲ್ಲಿ ಸಮೃದ್ಧ ವಾತಾವರಣವಿತ್ತು. ತಂದೆಗೆ ತನ್ನ ಮಕ್ಕಳಿಗೆ ಸರ್ವರೀತಿಯಲ್ಲಿಯೂ ಸ್ವಾತಂತ್ರ್ಯ ನೀಡುವ ಮನೋಭಾವವಿತ್ತು. ಉದಾರತೆ, ಮಾನವೀಯ ಅನುಕಂಪ, ತ್ಯಾಗ, ಆಧುನಿಕತೆ, ಪಾಶ್ಚಿಮಾತ್ಯ ನಿಲುವು, ಹೊಸ ವಿಚಾರಗಳಿಗೆ ಮುಕ್ತ ಮನೋಭಾವ (liberalization for ideas) ನರೇಂದ್ರನಿಗೆ ತನ್ನ ತಂದೆಯ ಕಡೆಯಿಂದ ಬಂದ ಗುಣಗಳಾಗಿದ್ದವು. ಸದಾಚಾರ, ಸಾಂಪ್ರದಾಯಿಕತೆ, ಸುಸಂಸ್ಕೃತಿ, ಪ್ರಬಲ ನೆನಪಿನ ಶಕ್ತಿ – ಇವು ತಾಯಿಯ ಕಡೆಯಿಂದ ಬಂದ ಗುಣಗಳು. ನರೇಂದ್ರನ ಮನೆಯು ಶ್ರೇಷ್ಠ ಮಟ್ಟದ ಪೌರಸ್ತ್ಯ ಮತ್ತು ಪಾಶ್ಚಿಮಾತ್ಯ ವಿಚಾರಧಾರೆಗಳ ಸಮಾಗಮವಾಗಿತ್ತು. ಅವನಿಗೆ ಶಾಲಾ ಕಾಲೇಜುಗಳ ಪಾಶ್ಚಿಮಾತ್ಯ ಶಿಕ್ಷಣಕ್ರಮದಿಂದ ವೈಚಾರಿಕತೆ ಮತ್ತು ವೈಜ್ಞಾನಿಕತೆಗಳು ದೊರೆತವು. ಇಂತಹ ವಾತಾವರಣದಲ್ಲಿ ವ್ಯಕ್ತಿತ್ವವನ್ನು ಬೆಳೆಸಿಕೊಂಡ ನರೇಂದ್ರನಲ್ಲಿ ಸಚ್ಚಾರಿತ್ರ್ಯದ ಜೊತೆ ವೈಜ್ಞಾನಿಕ ಹಾಗೂ ವೈಚಾರಿಕ (rational) ಮನೋಭಾವಗಳು ಅವನ ಎಲ್ಲ ಜ್ಞಾನಾರ್ಜನಾ ಕ್ಷೇತ್ರಗಳಲ್ಲಿಯೂ ಓತಪ್ರೋತವಾಗಿ ವ್ಯಾಪಿಸಿದ್ದವು. ಪ್ರೌಢ ವಯಸ್ಸಿನಲ್ಲಿ ಆತನನ್ನು ಕಂಡವರಿಗೆಲ್ಲರಿಗೂ ಈತ ಅತ್ಯಂತ ಮೇಧಾವಿ ವಿದ್ಯಾರ್ಥಿಯೆಂಬುದು ಅರಿವಾಗುತಿತ್ತು. ಇವೆಲ್ಲವೂ ಮುಂದೆ ವೈಜ್ಞಾನಿಕ ಮನೋಭಾವನೆಯನ್ನು ಮೈಗೂಡಿಸಿಕೊಳ್ಳಲು ನರೇಂದ್ರನಿಗೆ ನೆರವಾದವು.

ಪರಿಣಾಮವಾಗಿ ನರೇಂದ್ರನು ಸಣ್ಣ ವಯಸ್ಸಿನಲ್ಲಿಯೇ ಅತ್ಯಪೂರ್ವ ಪ್ರಾಪಂಚಿಕ ಯಶಸ್ಸನ್ನು ಗಳಿಸಿದನು. ಆದರೆ ಇವು ಅವನನ್ನು ಸಂತೃಪ್ತನನ್ನಾಗಿಸಲಿಲ್ಲ. ಪೌರಸ್ತ್ಯ ಮತ್ತು ಪಾಶ್ಚಿಮಾತ್ಯ ದಾರ್ಶನಿಕರ ವಿಚಾರಧಾರೆಯ (Philosophy) ಆಳವಾದ ಅಧ್ಯಯನ ಮತ್ತು ಆಂಗ್ಲ ಅಧ್ಯಾಪಕರು, ಕೊಲ್ಕತಾದ ಪ್ರಸಿದ್ಧ ವ್ಯಕ್ತಿಗಳು ಮತ್ತು ಆಧ್ಯಾತ್ಮಿಕ ವಾಗ್ಮಿಗಳ ಸಂಪರ್ಕ – ಇವಾವುವೂ ಅವನಲ್ಲಿ ಹೊತ್ತಿ ಉರಿಯುತ್ತಿದ್ದ ಜಿಜ್ಞಾಸೆಯನ್ನು ಶಮನಗೊಳಿಸಲು ಅಶಕ್ತವಾದುವು.

ನರೇಂದ್ರನಲ್ಲಿ ಹೊಯ್ದಾಡುತ್ತಿದ್ದ ಈ ಆಧುನಿಕತೆಯ ಮತ್ತು ವೈಜ್ಞಾನಿಕತೆಯ ಮಾನಸಿಕ ಮಹಾಸಮುದ್ರವು, ಗಂಗಾನದಿಯ ತಟದಲ್ಲಿ ವಾಸಿಸುತ್ತಿದ್ದ ದಕ್ಷಿಣೇಶ್ವರದ ಮಹಾಗುರುವಿನ ಸಂಪರ್ಕದೆದುರು ಬಂದು ನಿಂತಾಗ ಮಾತ್ರವೇ, ತನ್ನ ಪ್ರಕ್ಷುಬ್ಧತೆಯನ್ನು ಕಳೆದುಕೊಂಡು ಪ್ರಶಾಂತವಾಯಿತು. ನರೇಂದ್ರನೆಂಬ ಜ್ಞಾನ ರತ್ನಾಕರ ವಾರಿಧಿಯು ಶ್ರೀರಾಮಕೃಷ್ಣರೆಂಬ ತನ್ನ ಮೂಲಸ್ರೋತಕ್ಕೆ ಹಿಂತಿರುಗಿದಾಗ ಮಾತ್ರವೇ ತನ್ನ ಲಯವನ್ನು ಕಂಡುಕೊಂಡಿತು. ಇದು ಮಾನವ ಇತಿಹಾಸದಲ್ಲಾದ ಎರಡು ಪ್ರಬಲ ಧಾರೆಗಳ ಅಪೂರ್ವ ಸಮಾಗಮ.

ಆ ಪ್ರಬಲ ವ್ಯಕ್ತಿತ್ವ ಇನ್ನೂ ಪಕ್ವವಾಗಲೇನೋ ಎಂಬಂತೆ ತಂದೆಯ ಮರಣ, ಆನಂತರ ಉಂಟಾದ ಕಷ್ಟಕಾರ್ಪಣ್ಯ, ನಷ್ಟ, ನಂಬಿಕೆದ್ರೋಹಗಳು ಬಾಳಿನಲ್ಲಿ ಕಂಡುಬರುವ ವಾಸ್ತವಿಕತೆಯ ಇನ್ನೊಂದು ಮುಖದ ದರ್ಶನವನ್ನು ನರೇಂದ್ರನಿಗೆ ಮಾಡಿಸಿತು. ಈಗಾಗಲೇ ಶ್ರೀರಾಮಕೃಷ್ಣರ ಸ್ಪರ್ಶ ಮತ್ತು ಆಧ್ಯಾತ್ಮಿಕ ಸಿಂಚನಗಳಿಂದ ಪ್ರಭಾವಿತನಾಗಿದ್ದ ನರೇಂದ್ರನು ಮನುಷ್ಯನ ಆಂತರ್ಯದ ಅನ್ವೇಷಣೆಯ ಅಗತ್ಯವನ್ನು ಇನ್ನೂ ಹೆಚ್ಚಾಗಿ ಮನಗಂಡನು. ಕೇವಲ ಭೌತಿಕ ವಿಜ್ಞಾನ, ಬುದ್ಧಿಶಕ್ತಿ ಮತ್ತು ಪ್ರಾಪಂಚಿಕ ಸುಖಗಳು ಮಾನವನ ಎಲ್ಲ ಸಮಸ್ಯೆಗಳಿಗೂ ಉತ್ತರವೀಯಲಾರದೆಂದು ಅವನು ಚೆನ್ನಾಗಿ ಕಂಡುಕೊಂಡನು. ಈಗವನ ಚಿತ್ತವು ಸರ್ವವಿಧದಲ್ಲಿಯೂ ಸರ್ವತೋಮುಖವಾದ ವಿಶ್ವಪರಿಹಾರವನ್ನು (Universal solution) ಕಂಡುಕೊಳ್ಳಲು ಚಡಪಡಿಸಿತು.

ಶ್ರೀರಾಮಕೃಷ್ಣರ ಅವತಾರೋದ್ದೇಶದಲ್ಲಿ ಆಧುನಿಕ ಜಗತ್ತಿಗೆ ದಿವ್ಯತೆಯ ಸಂದೇಶವನ್ನು ಜಗತ್ತಿನಲ್ಲೆಲ್ಲಾ ಪ್ರಸರಿಸಲು, ಇಂತಹ ಬಲಾಢ್ಯ ವ್ಯಕ್ತಿಯ ಸಂದೇಹ ಶಮನದ ಆವಶ್ಯಕತೆಯಿತ್ತು. ನರೇಂದ್ರನು ತನ್ನ ಆಧುನಿಕ ಮತ್ತು ವೈಚಾರಿಕತೆಯೆಂಬ ಒರೆಗಲ್ಲಿಗೆ ಸನಾತನ ಧರ್ಮವೇ ಮೂರ್ತಿವೆತ್ತರಾದ ಶ್ರೀರಾಮಕೃಷ್ಣರೆಂಬ ಸುವರ್ಣವನ್ನು ಒರೆಹಚ್ಚಿ ಸಮಾಧಾನವನ್ನೂ, ಚರಮ ಸ್ಥಿತಿಯನ್ನೂ ಪಡೆದನು. ಹೀಗೆ ಬಾಹ್ಯ ಮತ್ತು ಆಂತರಿಕ ಜೀವನದಲ್ಲಿ ತ್ರಿವಿಕ್ರಮನಂತೆ ಬೆಳೆದ ನರೇಂದ್ರ ಮುಂದೆ ಸ್ವಾಮಿ ವಿವೇಕಾನಂದರಾಗಿ ಇಡೀ ಜಗತ್ತಿಗೆ, 'ವಿಜ್ಞಾನವನ್ನು ಸಮರ್ಥವಾಗಿ ಎದುರಿಸಬಲ್ಲ ಧರ್ಮವು ವೇದಾಂತವೊಂದೇ' ಎಂದು ಮನಮುಟ್ಟುವಂತೆ ಸಾರಲು ಶಕ್ತರಾದರು.

ಶ್ರೀರಾಮಕೃಷ್ಣರ ಬಳಿಗೆ ಬಂದ ನಂತರ ಸ್ವಾಮಿ ವಿವೇಕಾನಂದರು ಮನಗಂಡ ಮುಖ್ಯವಾದ ಅಂಶ ಇದು: ಹೇಗೆ ಸೂಕ್ತ ಶಿಕ್ಷಣ ಮತ್ತು ತರಬೇತಿಗಳಿಲ್ಲದೆಯೇ ಭೌತಶಾಸ್ತ್ರ, ರಾಸಾಯನಿಕ ಶಾಸ್ತ್ರ ಮುಂತಾದ ವಿಜ್ಞಾನಕ್ಷೇತ್ರಗಳಲ್ಲಿ ಉಂಟಾಗುತ್ತಿರುವ ಹೊಸ ಹೊಸ ಆವಿಷ್ಕಾರಗಳನ್ನು ಅರಿಯಲು ಕಷ್ಟವೋ, ಹಾಗೆಯೇ ಧಾರ್ಮಿಕ ಪ್ರತಿಪಾದನೆ, ಅತೀಂದ್ರಿಯ ಮತ್ತು ಆಧ್ಯಾತ್ಮಿಕ ಅನುಭವಗಳು – ಇವನ್ನು ಅರ್ಥ ಮಾಡಿಕೊಳ್ಳಲು, ಅನುಭವಿಸಲು, ನಿರಾಕರಿಸಲು, ಕನಿಷ್ಠ ಅರ್ಹತೆ/ಯೋಗ್ಯತೆಯ ಆವಶ್ಯಕತೆ ಇದೆ ಎಂಬುದು. ಭೌತವಿಜ್ಞಾನದ ಕ್ಷೇತ್ರದಲ್ಲಿ ಹೇಗೋ ಹಾಗೆ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಕೂಡ ಶಿಕ್ಷಾರ್ಥಿಗೆ ಶ್ರದ್ಧೆ, ಪ್ರಾಮಾಣಿಕತೆಗಳ ಆವಶ್ಯಕತೆ ಖಂಡಿತ ಇದೆ. ನರಿಗೆಟುಕದ ದ್ರಾಕ್ಷಿಯು ಹುಳಿ ಹೇಗೋ ಹಾಗೆಯೇ, ಸಾಮಾನ್ಯರ ಅನುಭವಕ್ಕೆ ನಿಲುಕಲಿಲ್ಲವೆಂದು ಧಾರ್ಮಿಕ ನಂಬಿಕೆ, ಅನುಭವಗಳನ್ನು ನಿರಾಕರಿಸುವುದು ಎಷ್ಟು ಸಮಂಜಸ? ಅಷ್ಟೇ ಅಲ್ಲ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಜಗತ್ತಿನಲ್ಲಿ ಇರುವುದಕ್ಕಿಂತಲೂ ಹೆಚ್ಚಾಗಿ ವೈಜ್ಞಾನಿಕ ಜಗತ್ತಿನಲ್ಲಿಯೂ ಮೂಢನಂಬಿಕೆ ಎನ್ನುವುದು ಇದೆ. ಹೀಗಾಗಿ ಈ ಅಂಧಶ್ರದ್ಧೆಯು ಎಲ್ಲ ಅನ್ವೇಷಣಾ ಕ್ಷೇತ್ರಗಳಿಂದಲೂ ತೊಲಗಬೇಕಾಗಿದೆ ಎನ್ನುವುದು ಸ್ವಾಮೀಜಿಯವರಿಗೆ ಚೆನ್ನಾಗಿ ಮನದಟ್ಟಾಯಿತು. ಅದಕ್ಕೆ ಪೂರಕವಾಗಿ ಸಮಸ್ತ ಲೋಕವೂ ಸುಖ, ಸಮೃದ್ಧಿ, ಶಾಂತಿಯನ್ನು ಹೊಂದಲು ಸ್ವಾಮೀಜಿ ತಮ್ಮದೇ ಒಂದು ಯೋಜನೆಯನ್ನು ಸಿದ್ಧಪಡಿಸಿದರು. ಆ ಯೋಜನೆಯು ಮೂರು ಅಂಶಗಳನ್ನು ಒಳಗೊಂಡಿದೆ:

**೧) ಮಾನವನ ಆಂತರಿಕ ವಿಕಾಸಕ್ಕೆ ಪೌರಸ್ತ್ಯರ ಕೊಡುಗೆಯಾದ ಸರ್ವಸಂಗ ಪರಿತ್ಯಾಗ ಮತ್ತು ಮೋಕ್ಷಾಕಾಂಕ್ಷೆ.**

**೨) ಪ್ರತಿಯೊಂದು ವಿಷಯವನ್ನೂ ಪರೀಕ್ಷಿಸಿ ಪರಾಮರ್ಶಿಸಿ ಒಪ್ಪುವ ವೈಚಾರಿಕತೆ.**

**೩) ಮಾನವನ ಸಮರ್ಪಕ ಹಾಗೂ ವ್ಯಾಪಕಸೇವೆಗಾಗಿ ಆಧುನಿಕತೆಯ ಬಳಕೆ.**

ಇವುಗಳ ಅನುಷ್ಠಾನಕ್ಕೆ ಸ್ವಾಮೀಜಿ ಒಂದು ನಿರ್ದಿಷ್ಟವಾದ ಕಾರ್ಯಪ್ರಣಾಳಿಕೆಯನ್ನು ರೂಪಿಸಲು ಮುಂದಾದರು.

**ವಿಜ್ಞಾನವೆಂದರೇನು?** ಪ್ರಯೋಗಗಳ ಮೂಲಕ ಪ್ರಮಾಣೀಕರಿಸಿ ಕಂಡುಹಿಡಿದ ಸಂಗತಿಗಳನ್ನು ಒಂದು ನಿರ್ದಿಷ್ಟ ಸಿದ್ಧಾಂತವನ್ನಾಗಿಸುವುದು; ಅದನ್ನು ವಾಸ್ತವಿಕ ಜಗತ್ತಿನಲ್ಲಿ ಪ್ರಯೋಗಕ್ಕೆ ಒಳಪಡಿಸುವುದು; ಹಾಗೆ ಕಂಡುಕೊಂಡ ಸತ್ಯಾಂಶವನ್ನು ಉಪಯೋಗಕರ ಚಟುವಟಿಕೆಗಳಿಗೆ ಅಳವಡಿಸುವುದು – ಇದೇ ವಿಜ್ಞಾನದ ಉದ್ದೇಶ. ಹಾಗೆಯೇ ವಿಜ್ಞಾನವು ತಾನು ಇನ್ನೂ ಯಾವುದನ್ನು ಸಂಶೋಧಿಸಿಲ್ಲವೋ ಅದನ್ನು ನಿರಾಕರಿಸುವುದಿಲ್ಲ, ಬದಲಾಗಿ ಅದರ ಅನ್ವೇಷಣೆಗೆ ಹೊರಡುತ್ತದೆ. ರಸಾಯನಶಾಸ್ತ್ರ ಮುಂತಾದ ವಿಜ್ಞಾನ ಶಾಖೆಗಳು ವಾಸ್ತವಿಕ ಜಗತ್ತಿನಲ್ಲಿ ಸತ್ಯವನ್ನು ಕಂಡುಹಿಡಿಯುತ್ತವೆ. ಇದೇ ರೀತಿಯಲ್ಲಿ ಧರ್ಮವು ಪಾರಮಾರ್ಥಿಕ ಲೋಕದ ಸತ್ಯವನ್ನು ಕಂಡುಹಿಡಿಯುತ್ತದೆ. ವಿಜ್ಞಾನ ಮತ್ತು ಧರ್ಮಗಳೆರಡೂ ನಮ್ಮ ಅರಿವನ್ನು ಸೀಮಿತಗೊಳಿಸುವ ಬೇಲಿಯನ್ನು ಕತ್ತರಿಸಲು ಸಹಾಯಮಾಡುವ ಸಾಧನಗಳು. ಮಾನವನನ್ನು ಸಕಲ ಕಟ್ಟುಗಳಿಂದ ಬಿಡಿಸುವ ಸಾಧನವಾಗಿ ವಿಜ್ಞಾನಕ್ಕೆ ಹಿನ್ನೆಲೆಯಾಗಿ ಹಾಗೂ ಆಧಾರಭೂತವಾಗಿ ಧರ್ಮ ನಿಂತಿದೆ. ಇವೆರಡರ ಕಾರ್ಯ ಮತ್ತು ಪ್ರಯೋಜನ ಒಂದೇ. ಈ ನಿಟ್ಟಿನಲ್ಲಿ ಧರ್ಮವೇ ವಿಜ್ಞಾನದ ಹಿರಿಯಣ್ಣ ಎನ್ನಬಹುದು.

ಆಧ್ಯಾತ್ಮಿಕತೆಯೂ ಸಹ ವಿಜ್ಞಾನವೇ. ಆಧ್ಯಾತ್ಮಿಕತೆಯೆಂದರೆ ಒಂದು ನಿರ್ದಿಷ್ಟ ಕ್ರಮವನ್ನು ಅನುಸರಿಸಿದಲ್ಲಿ ಯಾರು ಬೇಕಾದರೂ ಅನುಭವಿಸಬಹುದಾದ ಸಾರ್ವತ್ರಿಕ ಸತ್ಯ. "ಯಾವುದೋ ಗ್ರಂಥವನ್ನು ಅಂಧಶ್ರದ್ಧೆಯಿಂದ ಅನುಸರಿಸದೆ, ನಿಮ್ಮ ಸ್ವಂತ ವಿಮರ್ಶೆ ಮತ್ತು ನ್ಯಾಯನಿರ್ಧರಣೆಗಳಿಂದ (reason & judgement) ತಿಳಿದು ಅನುಸರಿಸಿದ ನಂತರ ಆದ ಅನುಭವಗಳು, ಧಾರ್ಮಿಕ ಗ್ರಂಥಗಳಲ್ಲಿರುವ ದಾರ್ಶನಿಕರ ಉಪದೇಶಗಳಲ್ಲಿ ಬೋಧಿಸಿರುವುದಕ್ಕೆ ತಾಳೆಯಾದಲ್ಲಿ ಮಾತ್ರ ಅವುಗಳನ್ನು ಒಪ್ಪಬೇಕು. ಕೇವಲ ಪರಂಪರೆ ಮುಂತಾದ ಬಾಹ್ಯಶ್ರದ್ಧೆಗಳಿಂದ ಧಾರ್ಮಿಕರಾಗಲು ಸಾಧ್ಯವಿಲ್ಲ. ಮನಸ್ಸನ್ನು ತಿಳಿಯಲು ಇಂದ್ರಿಯನಿಗ್ರಹ ಮುಂತಾದ ವಿಧಾನದಿಂದ, ಕೊನೆಗೆ ಮನವನ್ನೇ ವಿಶ್ಲೇಷಿಸುವ ವೈಜಾನಿಕ ಕ್ರಮವೇ ಆಧ್ಯಾತ್ಮಿಕತೆ" ಎಂದು ಸ್ವಾಮೀಜಿ ಹೇಳುತ್ತಾರೆ. ಸಾಂಪ್ರದಾಯಿಕ ಧರ್ಮಾಚರಣೆಯನ್ನು ಅನುಸರಿಸುವ ಮುನ್ನ ಅವುಗಳ ಪ್ರಾಮಾಣಿಕತೆಯನ್ನು ನಿರ್ಧರಿಸಿ ಅನುಷ್ಠಾನ ಮಾಡಬೇಕು. ಹಾಗೂ ಅವುಗಳನ್ನು ವಿಮರ್ಶಿಸುವ ಹಾಗಿದ್ದರೆ, ಮೊದಲು ಅವುಗಳನ್ನು ನಮ್ಮ ಜೀವನದಲ್ಲಿ ಯಥಾರ್ಥ ರೀತಿಯಲ್ಲಿ ಅನುಷ್ಠಾನ ಮಾಡಿದ ನಂತರವೇ ಅವುಗಳ ಪ್ರಾಮಾಣಿಕತೆಯನ್ನು ವಿಮರ್ಶಿಸಬೇಕು ಎನ್ನುವುದು ಅವರ ಅಭಿಪ್ರಾಯ.

ಹೀಗಾಗಿ ಅತೀಂದ್ರಿಯ ಮತ್ತು ಅಂತರ್ದೃಷ್ಟಿಯ ಮಹತ್ತ್ವವನ್ನು ವಿಜ್ಞಾನವು ಅರಿಯಬೇಕು. ಆಧ್ಯಾತ್ಮಿಕ ಕ್ಷೇತ್ರವೂ ಅದೇ ಜಾಡನ್ನು ಹಿಡಿದು ಹೊರಟಿರುವುದರಿಂದ, ವಿಜ್ಞಾನಿಯೂ ಮತ್ತು ಋಷಿಯೂ ಈ ಅನ್ವೇಷಣಾ ಪ್ರಕ್ರಿಯೆಯ ವರ್ತುಲದಲ್ಲಿ ಎಲ್ಲೋ ಒಂದು ಕಡೆ ಒಂದಾಗುತ್ತಾರೆ. ಆಧುನಿಕ ಋಷಿಗಳಾದ ಸ್ವಾಮಿ ವಿವೇಕಾನಂದರು ಈ ಎರಡೂ ಅನ್ವೇಷಣಾ ಶಕ್ತಿಗಳ ಸಮರಸಮೂರ್ತಿಯಂತೆ ಇದ್ದರು. ಸತ್ಯಾನ್ವೇಷಣೆಯ ಹಂಬಲವು ಮಾನವನ ಅನೇಕ ಶತಮಾನಗಳ ತುಡಿತವಾಗಿದೆ. ಬಾಹ್ಯ ಮತ್ತು ಆಂತರ್ಯಗಳೆರಡರಲ್ಲೂ ಮಾನವನು ಹೊಕ್ಕಿ ಹುಡುಕುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿದ್ದಾನೆ. ವೈದಿಕ ಋಷಿಗಳ ಅಂತರಾನ್ವೇಷಣೆಯು ವ್ಯಕ್ತಿನಿಷ್ಠವಾಗಿದ್ದರೆ (subjective), ಪಾಶ್ಚಿಮಾತ್ಯರು ತಮ್ಮ ತೀಕ್ಷ್ಣವಾದ ಬುದ್ಧಿಶಕ್ತಿಯಿಂದ ವಸ್ತುನಿಷ್ಠ (objective) ಸತ್ಯವನ್ನು ಬಾಹ್ಯ ಜಗತ್ತಿನಲ್ಲಿ ಕಂಡುಹಿಡಿಯಲು ಹೊರಟರು. ಪ್ರಚಂಡ ಕಾರ್ಯೋನ್ಮುಖತೆ ಮತ್ತು ಸಂಸಾರವಿರಕ್ತಿಗಳೆರಡೂ (ಪ್ರವೃತ್ತಿ ಮತ್ತು ನಿವೃತ್ತಿ) ತಮ್ಮ ತಮ್ಮ ಉಚ್ಛ್ರಾಯ ಸ್ಥಿತಿಯಲ್ಲಿ ಒಂದೇ ವ್ಯಕ್ತಿಯಲ್ಲಿ ಅಭಿವ್ಯಕ್ತವಾದಾಗ ಮಾತ್ರ, ಅವನು ಪರಿಪೂರ್ಣನಾಗುತ್ತಾನೆ. ಅಂಥವನು ಮಾತ್ರ ಈ ಪ್ರಪಂಚಕ್ಕೆ ಏನಾದರೂ ಕೊಡುಗೆ ನೀಡಬಲ್ಲ. ಈ ಎರಡೂ ಪಕ್ಷಗಳ ಸತ್ಯಾಸತ್ಯತೆಯನ್ನು ಮನಗಂಡಿದ್ದ ಸ್ವಾಮಿ ವಿವೇಕಾನಂದರು ತಮ್ಮ ಅಂತಸ್ಸತ್ವದಲ್ಲಿ ಈ ಎರಡೂ ಸಾಮರ್ಥ್ಯಗಳನ್ನು